# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1146(1398) |
| ಸದಸ್ಯರ ಹೆಸರು | ಶ್ರೀ.ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | 18-03-2020 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೃಷಿ ಇಲಾಖೆಯ ವತಿಯಿಂದ ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಬಾಡಿಗೆ ರೂಪದಲ್ಲಿ ನೀಡಲಾಗುತ್ತಿದೆಯೇ; | ಹೌದು, ಕೃಷಿ ಇಲಾಖೆಯ ವತಿಯಿಂದ ಹೋಬಳಿಗಳಲ್ಲಿ ಸ್ಥಾಪಿಸಿರುವ ಕೃಷಿ ಯಂತ್ರಧಾರೆ ಕೇಂದ್ರಗಳ ಮುಖಾಂತರ ಬಾಡಿಗೆ ಆಧಾರದ ಮೇಲೆ ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಒದಗಿಸಲಾಗುತ್ತಿದೆ. |
| ಆ) | ಯಾವ ಯಾವ ಯಂತ್ರಗಳನ್ನು ಸದರಿ ಯೋಜನೆಯಡಿ ನೀಡಲಾಗುತ್ತಿದೆ; (ವಿವರ ನೀಡುವುದು) | ಕೃಷಿ ಯಂತ್ರಧಾರೆ ಕೇಂದ್ರಗಳಲ್ಲಿ, ಸ್ಥಳೀಯ ಬೆಳೆಗಳಿಗೆ ಅನುಗುಣವಾಗಿ ಹಾಗೂ ರೈತರಿಂದ ಬೇಡಿಕೆಯಿರುವ ಯಂತ್ರೋಪಕರಣಗಳನ್ನು ಜಿಲ್ಲಾ ಮಟ್ಟದ ಸಮಿತಿಯಿಂದ ಅನುಮೋದನೆ ಪಡೆದು ದಾಸ್ತಾನುಮಾಡಿ ರೈತರಿಗೆ ಬಾಡಿಗೆ ಆಧಾರದ ಮೇರೆಗೆ ಒದಗಿಸಲಾಗುತ್ತಿದೆ. ಕೃಷಿ ಯಂತ್ರಧಾರೆ ಕೇಂದ್ರಗಳಲ್ಲಿ ಭೂಮಿ ಸಿದ್ಧತೆಯಿಂದ ಕೊಯ್ಲು ಮತ್ತು ಕೊಯ್ಲೋತ್ತರ ಹಾಗೂ ಸಂಸ್ಕರಣಾ ಉಪಕರಣಗಳನ್ನು ಒದಗಿಸಲಾಗುತ್ತಿದೆ. ಒದಗಿಸಲಾಗುವ ಯಂತ್ರೋಪಕರಣಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಇ) | ಹಾಗಾದರೆ ಈ ಯೋಜನೆಯ ರೂಪುರೇಷೆಗಳೇನು; ಹಾಗೂ ಅಂದಾಜು ಮೊತ್ತವೆಷ್ಟು; (ವಿವರ ನೀಡುವುದು) | ರೈತರಿಗೆ ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಕಡಿಮೆ ಬಾಡಿಗೆ ದರದಲ್ಲಿ ಭೂಮಿ ಸಿದ್ಧತೆಯಿಂದ ಕೊಯ್ಲು ಮತ್ತು ಸಂಸ್ಕರಣೆಗೆ ಉಪಯುಕ್ತವಾಗುವ ವಿವಿಧ ಕೃಷಿ ಯಂತ್ರೋಪಕರಣಗಳನ್ನು ಒದಗಿಸುವುದು ಕೃಷಿ ಯಂತ್ರಧಾರೆ ಯೋಜನೆಯ ಉದ್ದೇಶವಾಗಿರುತ್ತದೆ.<br>ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಹೋಬಳಿ ಮಟ್ಟದಲ್ಲಿ ನೊಂದಾಯಿತ ಚಾರಿಟೆಬಲ್ ಟ್ರಸ್ಟ್/ಸರ್ಕಾರೇತರ ಸಂಸ್ಥೆ/ನೊಂದಾಯಿತ ರೈತ ಉತ್ಪಾದಕರ ಸಂಘ ಸಂಸ್ಥೆಗಳು/ಕೃಷಿ ಯಂತ್ರೋಪಕರಣಗಳ ತಯಾರಕಾ ಸಂಸ್ಥೆಗಳು/ಸ್ವಸಹಾಯ ಸಂಘಗಳು/ಜಿಲ್ಲಾ ಸಾವಯವ ಮತ್ತು ಸಿರಿ ಧಾನ್ಯಗಳ ಒಕ್ಕೂಟಗಳು/ ಕೃಷಿ ವಿಜ್ಞಾನ ಕೇಂದ್ರಗಳು/ಮಠಗಳು/ ಧಾರ್ಮಿಕ ಸಂಸ್ಥೆಗಳನ್ನು EoI ಮೂಲಕ ಆಯ್ಕೆ ಮಾಡಲಾಗುತ್ತದೆ. ಆಯ್ಕೆಯಾಗುವ ಸಂಸ್ಥೆಗಳ ಸಹಭಾಗಿತ್ವದಲ್ಲಿ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.<br>ಸ್ಥಳೀಯ ಬೆಳೆಗಳಿಗೆ ಅನುಗುಣವಾಗಿ ಹಾಗೂ ರೈತರಿಂದ ಬೇಡಿಕೆಯಿರುವ ಯಂತ್ರೋಪಕರಣಗಳನ್ನು ಜಿಲ್ಲಾ ಮಟ್ಟದ ಸಮಿತಿಯಿಂದ ಅನುಮೋದನೆ ಪಡೆದು ಕೃಷಿ ಯಂತ್ರಧಾರೆ ಕೇಂದ್ರಗಳಲ್ಲಿ ದಾಸ್ತಾನು ಮಾಡಿ ರೈತರಿಗೆ ಕಡಿಮೆ ಬಾಡಿಗೆ ದರದಲ್ಲಿ ಒದಗಿಸಲಾಗುತ್ತಿದೆ. |

| | | |
|---|---|---|
| | | ಕೃಷಿ ಯಂತ್ರಧಾರೆ ಯೋಜನೆಯಡಿ ನೀಡುತ್ತಿರುವ ಸಹಾಯಧನದ ವಿವರಗಳು ಈ ಕೆಳಕಂಡಂತಿದೆ: |

| ವರ್ಷ | ಸರ್ಕಾರದಪಾಲು | ಸಂಸ್ಥೆಯಪಾಲು | ಒಟ್ಟು |
|---|---|---|---|
| ಸ್ಲಾಬ್ – I (ರೂ.40.00ಲಕ್ಷಗಳು) | | | |
| ಮೊದಲನೆ ವರ್ಷ | 22.00 | 6.00 | 28.00 |
| ಎರಡನೇ ವರ್ಷ | 6.00 | 6.00 | 12.00 |
| ಒಟ್ಟು | 28.00 | 12.00 | 40.00 |
| ಜಿಲ್ಲೆಗಳು : ಬೆಂಗಳೂರು (ನಗರ), ವಿಜಯಪುರ, ಕಲಬುರಗಿ, ಉತ್ತರಕನ್ನಡ, ಕೊಡಗು, ಚಿಕ್ಕಮಗಳೂರು & ದಕ್ಷಿಣಕನ್ನಡ. | | | |
| ಸ್ಲಾಬ್ – II (ರೂ.75.00ಲಕ್ಷಗಳು) | | | |
| ಮೊದಲನೆ ವರ್ಷ | 41.25 | 11.25 | 52.50 |
| ಎರಡನೇ ವರ್ಷ | 11.25 | 11.25 | 22.50 |
| ಒಟ್ಟು | 52.50 | 22.50 | 75.00 |
| ಜಿಲ್ಲೆಗಳು : ಬೆಂಗಳೂರು (ಗ್ರಾಮಾಂತರ), ಬೀದರ್, ಗದಗ, ಮಂಡ್ಯ, ಶಿವಮೊಗ್ಗ, ಕೊಪ್ಪಳ, ರಾಯಚೂರು, ಬಾಗಲಕೋಟೆ, ಉಡುಪಿ, ತುಮಕೂರು, ಬಳ್ಳಾರಿ, ರಾಮನಗರ, ಚಿತ್ರದುರ್ಗ, ಹಾಸನ, ಮೈಸೂರು, ಚಾಮರಾಜನಗರ & ಯಾದಗಿರಿ. | | | |
| ಸ್ಲಾಬ್ – III (ರೂ.100.00ಲಕ್ಷಗಳು) | | | |
| ಮೊದಲನೆ ವರ್ಷ | 55.00 | 15.00 | 70.00 |
| ಎರಡನೇ ವರ್ಷ | 15.00 | 15.00 | 30.00 |
| ಒಟ್ಟು | 70.00 | 30.00 | 100.00 |
| ಜಿಲ್ಲೆಗಳು : ದಾವಣಗೆರೆ, ಚಿಕ್ಕಬಳ್ಳಾಪುರ, ಕೋಲಾರ, ಧಾರವಾಡ & ಹಾವೇರಿ | | | |

ಒಟ್ಟಾರೆಯಾಗಿ, ಸರ್ಕಾರದ ಸಹಾಯಧನವನ್ನು70:30ರ ಅನುಪಾತದಲ್ಲಿ ಸರ್ಕಾರ/ಇಲಾಖೆ ಮತ್ತು ಆಯ್ಕೆಯಾದ ಸಂಸ್ಥೆಗಳು ಅನುಕ್ರಮವಾಗಿ ನೀಡಲಾಗುತ್ತಿದೆ. ಮೇಲ್ಕಂಡಂತೆ ವರ್ಷವಾರು ಬದಲಾಗಿ ಕಾರ್ಯಾದೇಶ ನೀಡಿದ ಮೊದಲನೇ ವರ್ಷದಲ್ಲಿಯೂ ಸಹ ಸಂಸ್ಥೆಯು ತನ್ನ ಪಾಲಿನ ಸಂಪೂರ್ಣ ಮೊತ್ತವನ್ನು ಹೂಡಿದಲ್ಲಿ ಅದೇ ವರ್ಷದಲ್ಲಿ 70:30ರ ಅನುಪಾತದಲ್ಲಿ ಸಹಾಯಧನವನ್ನು ನೀಡಲಾಗುತ್ತಿದೆ ಹಾಗೂ ಪ್ರಾರಂಭಿಕವಾಗಿ ಆಡಳಿತಾತ್ಮಕ/ಕಛೇರಿ ನಿರ್ವಹಣೆ ವೆಚ್ಚಗಳಿಗೆ ಪ್ರತಿ ಕೇಂದ್ರಕ್ಕೆ ರೂ.1.50 ಲಕ್ಷಗಳ ಸಹಾಯಧನವನ್ನು ಒಂದು ಬಾರಿ ಮಾತ್ರ ನೀಡಲಾಗುತ್ತಿದೆ.

ಪ್ರತಿ ಕೃಷಿ ಯಂತ್ರಧಾರೆ ಕೇಂದ್ರಗಳಿಗೆ ಆಯಾ ಪ್ರದೇಶಕ್ಕನುಗುಣವಾಗಿ ಗರಿಷ್ಟ ರೂ.70.00ಲಕ್ಷಗಳ ಸಹಾಯಧನ ಒದಗಿಸಿ ಗರಿಷ್ಟ ರೂ.100.00 ಲಕ್ಷಗಳ ಯಂತ್ರೋಪಕರಣಗಳನ್ನು ದಾಸ್ತಾನು ಮಾಡಲು ಅವಕಾಶ ಕಲ್ಪಿಸಲಾಗಿದೆ. ಸದರಿ ಯೋಜನೆಯಡಿ ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದ ಮೇರೆಗೆ ಹೆಚ್ಚುವರಿಯಾಗಿ ಒದಗಿಸಲು, ಚಾಲ್ತಿಯಲ್ಲಿರುವ ಕೇಂದ್ರಗಳಿಗೆ ನೂತನ ಯಂತ್ರೋಪಕರಣಗಳ ಖರೀದಿಗೆ ಅಥವಾ ಕೇಂದ್ರಗಳಲ್ಲಿ

| | | |
|---|---|---|
| | | ಲಭ್ಯವಿರುವ ಉಪಕರಣಗಳನ್ನು/ಯಂತ್ರೋಪಕರಣಗಳನ್ನು ಬದಲಾಯಿಸಲು ರೂ.10.00 ಲಕ್ಷಗಳ ವಾರ್ಷಿಕ ವಹಿವಾಟು ಇರುವ ಕೇಂದ್ರಗಳಿಗೆ ರೂ.5.00 ಲಕ್ಷಗಳ ಸಹಾಯಧನ ಮತ್ತು ವಾರ್ಷಿಕ ವಹಿವಾಟು ರೂ.10.00 ಲಕ್ಷಗಳಿಗಿಂತ ಕಡಿಮೆ ಇರುವ ಕೇಂದ್ರಗಳಿಗೆ ರೂ.2.50 ಲಕ್ಷಗಳ ಸಹಾಯಧನವನ್ನು ಪ್ರತಿ ಕೇಂದ್ರಕ್ಕೆ, ಸರ್ಕಾರದ ಪಾಲು ಶೇ.50 ಮತ್ತು ಸಂಸ್ಥೆಯ ಪಾಲು ಶೇ.50 ರ ಅನುಪಾತದಲ್ಲಿ ನೀಡಲಾಗುತ್ತಿದೆ.<br>ಕೃಷಿ ಯಂತ್ರಧಾರೆ ಕೇಂದ್ರಗಳಲ್ಲಿ ದಾಸ್ತಾನು ಮಾಡಿರುವ ಯಂತ್ರೋಪಕರಣಗಳನ್ನು ಸತತವಾಗಿ ಬಳಕೆ ಮಾಡಿರುವುದರಿಂದ ದುರಸ್ಥಿಯಲ್ಲಿರುವ ಹಳೆಯ ಹಾಗೂ ಅನುಪಯುಕ್ತ ಯಂತ್ರೋಪಕರಣಗಳನ್ನು ಜಿಲ್ಲಾ ಅನುಷ್ಠಾನ ಸಮಿತಿಯ ಅನುಮೋದನೆ ಪಡೆದು KTPP Act ಅನ್ವಯ ವಿಲೇವಾರಿ ಮಾಡಿ, ಹೊಸ/ನೂತನ ಯಂತ್ರೋಪಕರಣಗಳನ್ನು ಖರೀದಿಸಿ ಅದೇ ಕೃಷಿ ಯಂತ್ರಧಾರೆ ಕೇಂದ್ರಕ್ಕೆ ಮರು ಹೂಡಿಕೆ ಮಾಡಲು ಅವಕಾಶವಿದೆ. |
| ಈ) | ಸದರಿ ಯೋಜನೆಯನ್ನು ಯಾವ ಸಾಲಿನಿಂದ ಜಾರಿಗೊಳಿಸಲಾಗಿದೆ. | ಸದರಿ ಯೋಜನೆಯನ್ನು 2014-15ನೇ ಸಾಲಿನಿಂದ ಜಾರಿಗೊಳಿಸಲಾಗಿರುತ್ತದೆ. |
| ಉ) | ಇದುವರೆವಿಗೂ ಸದರಿ ಯೋಜನೆಯಿಂದ ಎಷ್ಟು ಮಂದಿ ರೈತರು ಇದರ ಉಪಯೋಗವನ್ನು ಪಡೆದಿದ್ದಾರೆ; | ಕೃಷಿ ಯಂತ್ರಧಾರೆ ಯೋಜನೆಯಿಂದ 2014-15ನೇ ಸಾಲಿನಿಂದ ಇಲ್ಲಿಯವರೆಗೆ ಸುಮಾರು 13.10 ಲಕ್ಷ ರೈತರು ಉಪಯೋಗವನ್ನು ಪಡೆದಿರುತ್ತಾರೆ. |
| ಊ) | ಯೋಜನೆಯಲ್ಲಿ ರಿಯಾಯಿತಿ ದರದಲ್ಲಿ ಬಾಡಿಗೆಗೆ ಕೃಷಿ ಯಂತ್ರೋಪಕರಣಗಳನ್ನು ನೀಡಲಾಗುತ್ತಿದೆಯೇ? (ವಿವರ ನೀಡುವುದು) | ಸದರಿ ಯೋಜನೆಯಡಿ ಕೃಷಿ ಯಂತ್ರೋಪಕರಣಗಳ ಬಾಡಿಗೆಯನ್ನು ಸ್ಥಳೀಯ ರೈತರು, ಕೃಷಿ ಇಲಾಖಾ ಅಧಿಕಾರಿಗಳನ್ನು ಒಳಗೊಂಡಂತೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಜಿಲ್ಲಾ ಮಟ್ಟದ ಸಮಿತಿಯಿಂದ ಕೃಷಿ ಯಂತ್ರೋಪಕರಣವಾರು ಬಾಡಿಗೆಯನ್ನು ನಿಗಧಿಪಡಿಸಲಾಗುತ್ತದೆ. ನಿಗಧಿಪಡಿಸಿದ ಬಾಡಿಗೆ ದರಗಳನ್ವಯ ರೈತರಿಗೆ ಯಂತ್ರೋಪಕರಣಗಳನ್ನು ಬಾಡಿಗೆಗೆ ಒದಗಿಸಲಾಗುವುದು. |

**ಸಂಖ್ಯೆ: ಕೃಇ/ಕೃಮಸ/19/2020**

(ಬಿ.ಸಿ. ಪಾಟೀಲ್) 16/3/2020

**ಕೃಷಿ ಸಚಿವರು**

## ಅನುಬಂಧ - ಎಲ್.ಸಿ.ಕ್ಯೂ-1146 (1398)

| ಕ್ರ.ಸಂ. | ಕೃಷಿ ಯಂತ್ರಧಾರೆ ಕೇಂದ್ರಗಳಲ್ಲಿ ದಾಸ್ತಾನು ಮಾಡಲಾಗಿರುವ ಯಂತ್ರೋಪಕರಣಗಳು |
|---|---|
| A | **ಭೂಮಿ ಸಿದ್ದತೆಯ ಉಪಕರಣಗಳು** |
| 1 | ಟ್ರ್ಯಾಕ್ಟರ್ ಮತ್ತು ಟ್ರ್ಯಾಕ್ಟರ್ನ ಬಿಡಿ ಭಾಗಗಳು ಉದಾ: ಹುಕ್, ಟ್ರೈಲರ್, ಟ್ರಾಲಿ, ಬೋಲ್ಟ್ಸ್ ಇತ್ಯಾದಿ |
| 2 | ಪವರ್ ಟಿಲ್ಲರ್ |
| 3 | ಎಂ.ಬಿ.ಪ್ಲೋ |
| 4 | ರೋಟವೇಟರ್ |
| 5 | ಡಿಸ್ಕ್ ಪ್ಲೋ |
| 6 | ಡಿಸ್ಕ್ ಹ್ಯಾರೋ |
| 7 | ಕಲ್ಟಿವೇಟರ್ |
| 8 | ಶುಗರ್ ಕೇನ್ ಸ್ಟಬಲ್ ಶೇವರ್ ಕಮ್ ಕಲ್ಟಿವೇಟರ |
| 9 | ಲೆವಲ್ಲರ್ ಬ್ಲೇಡ್ |
| 10 | ಕೇಜ್ ವೀಲ್ |
| 11 | ಬ್ಲೇಡ್ ಹ್ಯಾರೋ |
| 12 | ಲೇಜರ್ ಗೈಡೆಡ್ ಲ್ಯಾಂಡ್ ಲೆವೆಲ್ಲರ್ |
| B | **ನಾಟಿ / ಬಿತ್ತನೆ ಮಾಡುವ ಉಪಕರಣಗಳು** |
| 13 | ಪ್ಯಾಡಿ ಪ್ಲಾಂಟರ್ |
| 14 | ಫರೋ ಒಪನರ್/ರಿಡ್ಜರ್ |
| 15 | ಸೀಡ್ ಕಮ್ ಫರ್ಟಿಲೈಸರ್ಸ್ ಡ್ರಿಲ್ |
| 16 | ರೋಟೋ ಟಿಲ್ ಡ್ರಿಲ್ |
| 17 | ರೈಸ್ ಟ್ರೇ ನರ್ಸರಿ ಪ್ರಿಪರೇಷನ್ ಮಷೀನ್ ವಿತ್ ಟ್ರೇಸ್ |
| 18 | ರೈಸ್ಡ್ ಬೆಡ್ ಪ್ಲಾಂಟರ್ |
| C | **ಅಂತರ ಕೃಷಿ ಸಲಕರಣೆ** |
| 19 | ವೀಡ್ ಸ್ಲಾಶರ್ |
| 20 | ರೈಸ್ ಸ್ಟ್ರಾ ಚಾಪರ್ |
| D .21 | **ಟ್ರ್ಯಾಕ್ಟರ್/ಪವರ್ ಟಿಲ್ಲರ್ ಮೌಂಟೆಡ್/ಪವರ್ ಆಪರೇಟೆಡ್ ಹೈಟೆಕ್ ಪಿ.ಪಿ. ಎಕ್ವಿಪ್‌ಮೆಂಟ್** |

| | |
|---|---|
| E | **ಕೊಯಿಲು ಮತ್ತು ಒಕ್ಕಣೆ ಮಾಡುವ ಉಪಕರಣಗಳು** |
| 22 | ಬಹುಬೆಳೆ ಒಕ್ಕಣೆ ಯಂತ್ರ |
| 23 | ಶೇಂಗಾ ಡಿಗ್ಗರ್ |
| 24 | ಶೇಂಗಾ ಪಾಡ್ ಸ್ಟ್ರಿಪರ್ |
| 25 | ಹಾರ್ವೆಸ್ಟರ್ ರೀಪರ್ |
| 26 | ಕಂಬೈನ್ಡ್ ಹಾರ್ವೆಸ್ಟರ್ |
| 27 | ಬೇಲರ್ |
| F | **ತ್ಯಾಜ್ಯ ವಸ್ತುಗಳ ನಿರ್ವಹಣಾ ಉಪಕರಣಗಳು** |
| 28 | ಶುಗರ್ಕೇನ್ ತ್ರಾಶ್ ಕಟ್ಟರ್ |
| 29 | ಕೋಕೋನಟ್ ಫ್ರಾಂಡ್ ಚಾಪರ್ |
| 30 | ಚಾಫ್ ಕಟರ್ |
| G | **ಕೃಷಿ ಸಂಸ್ಕರಣಾ ಉಪಕರಣಗಳು** |
| 31 | ದಾಲ್ ಪ್ರೋಸೆಸರ್ |
| 32 | ಮಿನಿ ರೈಸ್ ಮಿಲ್ |
| 33 | ಮಿನಿ ಆಯಿಲ್ ಎಕ್ಸ್‌ಪೆಲ್ಲರ್ |
| 34 | ರಾಗಿ ಪಾಲಿಶಿಂಗ್ ಮೆಷಿನ್ |
| 35 | ರಾಗಿ ಕ್ಲೀನಿಂಗ್ ಮೆಷಿನ್ |
| 36 | ಶುಗರ್ ಕೇನ್ ಕ್ರಶರ್ |
| 37 | ಫ್ಲೋರ್ ಮಿಲ್ |
| 38 | ಪಲ್ವರೈಸರ್ಗಳು |
| 39 | ರವಾ/ಕ್ಯಾಟಲ್ ಫೀಡ್ ಮೆಷಿನ್ |
| 40 | ಚಿಲ್ಲಿ ಪೌಂಡಿಗ್ ಮೆಷಿನ್ |
| 41 | ಶಾವಿಗೆ/ವರ್ಮಿಸಿಲ್ಲಿ ಮೆಷಿನ್ |
| 42 | ಶುಗರ್ ಕೇನ್ ಜ್ಯೂಸ್ ಮೇಕಿಂಗ್ ಮೆಷಿನ್ |
| 43 | ವೀಟ್ ಪಾಲಿಶರ್ |
| 44 | ಡೀಸೆಲ್ ಪಂಪ್ ಸೆಟ್‌ಗಳು |
| * | ಈ ಮೇಲೆ ತಿಳಿಸಿರುವ ಯಂತ್ರೋಪಕರಣಗಳನ್ನು ಹೊರತುಪಡಿಸಿ ರೈತರಿಂದ ಬೇಡಿಕೆಯಿರುವ ಹಾಗೂ ಇತರೆ ಆಧುನಿಕ ಯಂತ್ರೋಪಕರಣಗಳನ್ನು ಜಿಲ್ಲಾ ಮಟ್ಟದ ಸಮಿತಿಯಿಂದ ಅನುಮೋದನೆ ಪಡೆದು ಕೃಷಿ ಯಂತ್ರಧಾರೆ ಕೇಂದ್ರಗಳಲ್ಲಿ ದಾಸ್ತಾನು ಮಾಡಿ ರೈತರಿಗೆ ಒದಗಿಸಲಾಗುವುದು. |